**ಅ.ದಾವಾ ನಂ. 115/15** **ಡಿ.ಡಬ್ಲ್ಯೂ-1**

**ದಿನಾಂಕ 04/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದಮರಿದ ಪಾಟೀ ಸವಾಲುಃ ಶ್ರೀ ಜಿ.ಜಿ.ಎಸ್. ವಕೀಲರಿಂದ**

ನನಗೆ ಈ ದಾವಾದ ವಾದಿಗಳು ಗೊತ್ತಿರುತ್ತಾರೆ. ನನಗೆ ಮೊದಲನೇ ಪ್ರತಿವಾದಿ ಗೊತ್ತಿರುತ್ತದೆ. ನಾನು ಈಗ ವಾಸ ಮಾಡುತ್ತಿರುವ ಸರ್ವೆ ನಂಬರ್ 66 ಆಗಿರುತ್ತದೆ. ಸದರ ಆಸ್ತಿಯಲ್ಲೇ ಮೊದಲನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಸರಿ. ನಾನು ಹಾಗೂ ಮೊದಲನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುವ ಸರ್ವೆ ನಂಬರ್ ಅಣ್ಣಪ್ಪಶೆಟ್ಟಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಹನುಮಂತಶೆಟ್ಟರಿಗೆ ಸೇರಿದ್ದಂತಹ ಆಸ್ತಿಯಾಗಿರುತ್ತದೆ. ಹನುಮಂತಶೆಟ್ಟಿ ಆಸ್ತಿಗಳಿಗೆ ಸೇರಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರಬೇಕು. ಅಣ್ಣಪ್ಪಶೆಟ್ಟಿಯ ತಂದೆಯ ಹೆಸರು ಹನುಮಂತಯ್ಯ ಎಂದರೆ ಸರಿ. ಅಣ್ಣಪ್ಪಶೆಟ್ಟಿಯ ತಮ್ಮ ತಿಮ್ಮಶೆಟ್ಟಿ. ತಿಮ್ಮಶೆಟ್ಟಿ ನನ್ನ ತಂದೆ ಎಂದರೆ ಸರಿ. ಅಣ್ಣಪ್ಪಶೆಟ್ಟಿಗೆ ಅಣ್ಣಪ್ಪನೆಂತಲೂ ಕರೆಯುತ್ತಿದ್ದರು ಎಂದರೆ ಸರಿ. ಅಣ್ಣಪ್ಪಶೆಟ್ಟಿ ಬಣಜಿಗ ಜಾತಿಗೆ ಸೇರಿದ್ದು, ಬಳೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ.

2. ಅಣ್ಣಪ್ಪಶೆಟ್ಟಿ ಯಾವಾಗ ಮೃತಪಟ್ಟರೆಂದು ನನಗೆ ಹೇಳಲಾಗುವುದಿಲ್ಲ. ಅಣ್ಣಪ್ಪಶೆಟ್ಟಿ ದಿಃ 02.07.1984 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಣ್ಣಪ್ಪಶೆಟ್ಟಿ ಯವರ ಹೆಂಡತಿ ಲಕ್ಷ್ಮಮ್ಮ. ಅಣ್ಣಪ್ಪಶೆಟ್ಟಿ ಮತ್ತು ಲಕ್ಷ್ಮಮ್ಮರವರಿಗೆ ಒಟ್ಟು 9 ಜನ ಮಕ್ಕಳು. 9 ಮಂದಿಯಲ್ಲಿ 4 ಗಂಡುಮಕ್ಕಳು ಮೃತಪಟ್ಟಿರುತ್ತಾರೆ ಮತ್ತು ಹೆಣ್ಣುಮಕ್ಕಳಲ್ಲಿ ಮೂವರು ಮೃತಪಟ್ಟಿರುತ್ತಾರೆ. ಅಣ್ಣಪ್ಪಶೆಟ್ಟಿಯ ಮೊದಲನೇ ಮಗ ಪುಟ್ಟಸ್ವಾಮಿ. ಅಣ್ಣಪ್ಪಶೆಟ್ಟಿ ಸ್ವಯಾರ್ಜಿತ ಆಸ್ತಿ ಆತನ ಮಕ್ಕಳಿಗೆ ಭಾಗವಾಗಬೇಕಲ್ಲವೇ ಎಂದು ಸಾಕ್ಷಿಯನ್ನು 3 ಬಾರಿ ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಅದು ಪಿತ್ರಾರ್ಜಿತ ಆಸ್ತಿ ಹನುಮಂತಶೆಟ್ಟಿ ಮಾಡಿದ್ದು ಎಂದು. ಹನುಮಂತ ಶೆಟ್ಟಿ ಆಸ್ತಿ ಮಾಡಿರುವ ಹಾಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆ ಅಣ್ಣಪ್ಪಶೆಟ್ಟಿಯ ಸ್ವಯಾರ್ಜಿತ ಆಸ್ತಿಗಳಲ್ಲಿ ಭಾಗ ಕೋರಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅಣ್ಣಪ್ಪಶೆಟ್ಟಿ ಉತ್ತರಾಧಿ ಮಠದಿಂದ 11 ಕ್ರಯಪತ್ರಗಳ ಮೂಲಕ ಖರೀದಿ ಮಾಡಿದ್ದಾಗಿರುತ್ತದೆ ಎಂದರೆ ಸರಿಯಲ್ಲ ಅಣ್ಣಪ್ಪಶೆಟ್ಟಿ 18.11.1906 ರಲ್ಲಿ, 24.01.1910 ರಲ್ಲಿ, 09.01.1910 ರಲ್ಲಿ, 20.06.1911 ರಲ್ಲಿ, 12.05.1914 ರಲ್ಲಿ, 22.03.1920 ರಲ್ಲಿ, 24.11.1919 ರಲ್ಲಿ, 12.06.1923 ರಲ್ಲಿ, 02.11.1925 ರಲ್ಲಿ,

03.11.1944, 07.09.1920 ರಲ್ಲಿ ಈ ದಾವಾ ಆಸ್ತಿಗಳನ್ನು ನೋಂದಾಯಿತ ಕ್ರಯದ ಮೂಲಕ ಖರೀದಿ ಮಾಡಿದ್ದಾಗಿರುತ್ತದೆ..

3. ಅಣ್ಣಪ್ಪಶೆಟ್ಟಿ ಜಿಲ್ಲಾಧಿಕಾರಿಗಳ ಮುಂದೆ 15.05.1975 ರಲ್ಲಿ ದಾವಾ ಆಸ್ತಿಗಳ ಪೈಕಿ ಆದೇಶವೊಂದನ್ನು ಪಡೆದಿರುತ್ತಾರೆ ಎಂದರೆ ಸುಳ್ಳು. ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿದ್ದೇನೆ ಅವೆಲ್ಲವೂ ಸುಳ್ಳು ದಾಖಲೆಗಳು. ಈ ದಾವೆಯನ್ನು 12-13 ಸರ್ವೆ ನಂಬರುಗಳಿಗೆ ವಾದಿಗಳು ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಜಿಲ್ಲಾಧಿಕಾರಿಗಳು ಅಣ್ಣಪ್ಪಶೆಟ್ಟಿ ಹಂತ ಹಂತವಾಗಿ ಆಸ್ತಿಗಳನ್ನು ಖರೀದಿ ಮಾಡಿರುವುದಾಗಿಯೂ ಅದಕ್ಕೆ ಪೂರಕವಾಗುವಂತೆ ಕ್ರಯಪತ್ರಗಳನ್ನು ನೀಡಿರುತ್ತಾರೆ ಎಂತಲೂ ನಿ.ಪಿ 1 ರ ಆದೇಶದಲ್ಲಿ ನಮೂದು ಮಾಡಿದ್ದಾರೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಅವೆಲ್ಲಾ ಸುಳ್ಳು ದಾಖಲೆಗಳು ಎಂದು. ಖರೀದಿ ಮಾಡಿದ ಆಸ್ತಿಯಾದ ಕಾರಣ ಜಿಲ್ಲಾಧಿಕಾರಿಗಳು ಸರ್ಕಾರದ ವತಿಯಿಂದ ಕಂದಾಯವನ್ನೂ ಸಹ ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗಳಲ್ಲಿ ಅಣ್ಣಪ್ಪಶೆಟ್ಟಿ ಆತನ ಹೆಂಡತಿ ಮತ್ತು ಮಕ್ಕಳು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹೇಳುತ್ತಾರೆ ಅವರ ಆಸ್ತಿ ಅವರು ಉಳುಮೆ ಮಾಡುತ್ತಿದ್ದಾರೆ, ನಮ್ಮ ಆಸ್ತಿಯನ್ನು ನಾವು ಉಳುಮೆ ಮಾಡುತ್ತಿದ್ದೇವೆ ಎಂದು. ದಾವಾ ಸ್ವತ್ತುಗಳು ಜೋಡಿಬಂಡಿಶೆಟ್ಟಿಹಳ್ಳಿಯಲ್ಲಿ ಬರುತ್ತದೆ. ಎಲ್ಲಾ ಆಸ್ತಿಗಳು ಒಟ್ಟು 15 ಚಿಲ್ಲರೆ ಎಕರೆ ಬರುತ್ತದೆ. ನನ್ನ ತಂದೆಯೂ ಬಳೆ ವ್ಯಾಪಾರ ಮಾಡುತ್ತಿದ್ದರೂ ಎಂದರೆ ಸರಿ. ನನ್ನ ತಂದೆ 10 ಎಕರೆ ಜಮೀನನ್ನು ಸಂಪಾದನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಎಷ್ಟು ಆಸ್ತಿ ಸಂಪಾದನೆ ಮಾಡಿದ್ದರು ಎಂದು ನಾನು ಯಾವುದೇ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ.

5. ಹನುಮಂತಶೆಟ್ಟಿಗೆ ಬಂಡಿಶೆಟ್ಟಿಹಳ್ಳಿಯಲ್ಲಿ ಎರಡು ಮನೆಗಳಷ್ಟೇ ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಒಂದೇ ಮನೆ ಇತ್ತು ಎಂದು. ಸದರಿ ಒಂದು ಮನೆಯನ್ನೇ ನನ್ನ ತಂದೆ ಮತ್ತು ಅಣ್ಣಪ್ಪಶೆಟ್ಟಿ ವಿಭಾಗ ಮಾಡಿಕೊಂಡಿದ್ದು ಎಂದರೆ ಸರಿ. ಅಣ್ಣಪ್ಪಶೆಟ್ಟಿಗೆ ಬಂದಂತಹ ಭಾಗವನ್ನು ಆ ಕಾಲಕ್ಕೆ ಅವರು ಮಾಡಿಕೊಂಡಿದ್ದು ನನ್ನ ತಂದೆಗೆ ಭಾಗಕ್ಕೆ ಬಂದಿದ್ದನ್ನು ಈಗಲು ಹಾಗೆಯೇ ಇಟ್ಟುಕೊಂಡಿದ್ದೇನೆ ಎಂದರೆ ಸರಿ. ಹನುವಂತಯ್ಯಶೆಟ್ಟಿ ಮನೆ ಸ್ವತ್ತನ್ನು ಹೊರತುಪಡಿಸಿ ಬೇರೆ ಇನ್ಯಾವುದೇ ತರಹದ ಆಸ್ತಿ ಮಾಡಿಲ್ಲ ಎಂದರೆ ಸರಿ. ಹನುಮಂತಯ್ಯಶೆಟ್ಟಿರವರ ಪಿರ್ತಾಜಿತ ಆಸ್ತಿಗಳನ್ನು ಹೊರತುಪಡಿಸಿ ನಮಗೆ ಬೇರೆ ಇನ್ಯಾವುದೇ ಪಿತ್ರಾರ್ಜಿತ ಆಸ್ತಿಗಳಿಲ್ಲ ಎಂದರೆ ಸರಿ.

6. ಅಣ್ಣಪ್ಪಶೆಟ್ಟಿಯ ಮಕ್ಕಳು ಉದ್ಯೋಗಕ್ಕೆಂದು ಬೇರೆ ಬೇರೆ ಊರುಗಳಾದ ಬೆಂಗಳೂರು ಮೈಸೂರಿನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಅಣ್ಣಪ್ಪಶೆಟ್ಟಿಯ ಮಕ್ಕಳು ಈ ರೀತಿ ಹೊರ ಊರುಗಳಲ್ಲಿ ಇದ್ದ ಕಾರಣ ಜಮೀನನ್ನು ಪಾಳು ಬಿಟ್ಟಿದ್ದರು ಎಂದರೆ ಸರಿಯಲ್ಲ. ಪಾಳು ಬಿಟ್ಟಂತಹ ಜಮೀನನ್ನು ನಾನು ಮತ್ತು ನನ್ನ ಸಹೋದರನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಣ್ಣಪ್ಪಶೆಟ್ಟಿ ಮಕ್ಕಳು ಜಮೀನುಗಳ ಬಳಿ ಬಂದಾಗಲೆಲ್ಲಾ ನಾನು ನನ್ನ ಹೆಂಡತಿ ಮತ್ತು ಮಕ್ಕಳು ಅವರ ವಿರುದ್ದ ಗಲಾಟೆ ಮಾಡಿದ್ದೇವೆ ಹಲವಾರು ಬಾರಿ ಎಂದರೆ ಸರಿಯಲ್ಲ. ಈ ಸಂಬಂಧ ನಿಮ್ಮ ವಿರುದ್ಧ ಪೊಲೀಸ್ ದೂರು ಸಹ ಆಗಿದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಅವರೆ ಗಲಾಟೆ ಮಾಡಿ ಅವರೇ ದೂರು ನೀಡಿರುತ್ತಾರೆ ಎಂದು. ಅವರ ಜಮೀನು ಅವರು ಉಳುಮೆ ಮಾಡಲು ವಿನಾಕರಣ ನಾನೇ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣಪ್ಪಶೆಟ್ಟಿ ಸ್ವಯಾರ್ಜಿತ ಆಸ್ತಿಗೂ ನನ್ನ ತಂದೆ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

7. 2008 ನೇ ಇಸವಿಯಲ್ಲಿ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಮತ್ತು ತಹಶೀಲ್ದಾರರ ಜೊತೆ ಶಾಮೀಲಾಗಿ ವಾದಿಗಳ ಸ್ವತ್ತುಗಳಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ ಅಕ್ರಮವಾಗಿ ನಾನು ಮತ್ತು ಮೊದಲನೇ ಪ್ರತಿವಾದಿಯೂ ವಾದಿಗಳ ಆಸ್ತಿಗಳಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಮೊದಲನೇ ಪ್ರತಿವಾದಿ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದೇವೆಯೇ ಹೊರತು ಅಣ್ಣಪ್ಪಶೆಟ್ಟಿಯ ಇತರೆ ಮಕ್ಕಳಿಗೆ ಭಾಗವೇ ಆಗಿಲ್ಲ ಎಂದರೆ ಸರಿಯಲ್ಲ. ಅಣ್ಣಪ್ಪಶೆಟ್ಟಿ ಮೃತಪಟ್ಟ ನಂತರ ಪೌತಿ ಆಧಾರದ ಮೇಲೆ ನೀವು ಖಾತೆ ಮಾಡಿಸಿಕೊಂಡಿದ್ದೀರಿ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಹನುಮಂತಶೆಟ್ಟಿಯ ಪಿತ್ರಾರ್ಜಿತ ಆಸ್ತಿಗೆ ನಾವು ಖಾತೆ ಮಾಡಿಸಿಕೊಂಡಿದ್ದೇವೆ ಎಂದು. ನಾನು, ಪುಟ್ಟಸ್ವಾಮಿ ಮತ್ತು ನನ್ನ ಸಹೋದರರು ಅಕ್ರಮವಾಗಿ ಅಣ್ಣಪ್ಪಶೆಟ್ಟಿಯ ಆಸ್ತಿಗಳಿಗೆ ಖಾತೆ ಮಾಡಿಸಿಕೊಂಡ ಕಾರಣ ವಾದಿಗಳು ಈ ದಾವೆ ತಂದಿರುತ್ತಾರೆ ಎಂದರೆ ಸರಿಯಲ್ಲ.

8. ದಾವಾ ಸ್ವತ್ತುಗಳಲ್ಲಿ ಅಣ್ಣಪ್ಪಶೆಟ್ಟಿಯ 9 ಮಕ್ಕಳಿಗೂ ಭಾಗ ಹೋಗಬೇಕು ಎಂದರೆ ಸರಿಯಲ್ಲ. 2007 ರ ವಿಭಾಗವನ್ನೂ ನಾವು ನೋಂದಣಿ ಮಾಡಿಸಿರುತ್ತೇವೆ. 2008 ನೇ ಇಸವಿಯವರೆಗೂ ಖಾತೆ ಪಹಣಿ ಎಲ್ಲವೂ ಅಣ್ಣಪ್ಪಶೆಟ್ಟಿಯ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಹನುಮಂತಶೆಟ್ಟಿಯ ಹೆಸರಿನಲ್ಲಿ ಬರುತ್ತಿತ್ತು ಎಂದು. ಅಣ್ಣಪ್ಪಶೆಟ್ಟಿಯ ವಾರಸುದಾರರ ಮತ್ತು ಮಕ್ಕಳು ಗಡಿ ಗುರುತಿಸಿ 9 ಭಾಗಗಳು

ಆಗಬೇಕೆಂದು ದಾವೆ ತಂದಿರುವ ವಿಚಾರ ನಿಮಗೆ ಗೊತ್ತೇ ಎಂದು ಕೇಳಲು ಸಾಕ್ಷಿ ಹೇಳುತ್ತಾರೆ ಅವರೇನೆ ತಂದಿದ್ದರು ಅದು ಸುಳ್ಳು ಎಂದು.

9. ಸರ್ವೆನಂ. 66/1 ರ ಪೂರ್ವಕ್ಕೆ ಬೋರೇಗೌಡ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಾಹೇಬರು ಹಾಗೂ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಈ ಸರ್ವೆ ನಂಬರ್ 17 ಗುಂಟೆ ವಿಸ್ತೀರ್ಣ ಇರುತ್ತದೆ.

10. ಸರ್ವೆನಂ. 65/1 ರಲ್ಲಿ 2 ಎಕರೆ 15 ಗುಂಟೆ ಇರುತ್ತದೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಾಹೇಬರು, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ಸಾಹೇಬರು ಇರುತ್ತದೆ.

11. ಸರ್ವೆನಂ. 66/2 ರಲ್ಲಿ 17 ಗುಂಟೆ ಇರುತ್ತದೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬೋರೆಗೌಡರ ಮನೆ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ರತ್ನಮ್ಮ ರಾಜೇಗೌಡ ಇರುತ್ತದೆ.

12. ಸರ್ವೆ ನಂ. 66/3 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

13. ಸರ್ವೆ ನಂ. 66/6 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

14. ಸರ್ವೆ ನಂ. 66/7 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

15. ಸರ್ವೆ ನಂ. 72/4 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

16. ಸರ್ವೆ ನಂ. 72/5 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

17. ಸರ್ವೆ ನಂ. 73 ರಲ್ಲಿ ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ.

18. ಸರ್ವೆ ನಂ. 74/2 ರಲ್ಲಿ 5 ಎಕರೆ 1 ಗುಂಟೆ ಆಸ್ತಿ ಇರುತ್ತದೆ. ಪೂರ್ವಕ್ಕೆ ಕಾಂತಮ್ಮ, ಪಶ್ಚಿಮಕ್ಕೆ ಯೋಗೇಶ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ರಸ್ತೆ ಇರುತ್ತದೆ.

19. ಸರ್ವೆ ನಂ. 91/1 ರಲ್ಲಿ 6 ಗುಂಟೆ ಆಸ್ತಿ ಇರುತ್ತದೆ. ಪೂರ್ವಕ್ಕೆ ಸಾಹೇಬರು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ಲಕ್ಷ್ಮಮ್ಮ ಇರುತ್ತದೆ.

20. ಸರ್ವೆ ನಂ. 90/3 ರಲ್ಲಿ  ಎಷ್ಟು ಗುಂಟೆ ಆಸ್ತಿ ಇರುತ್ತದೋ ನನಗೆ ನೆನಪಿಲ್ಲ. ಅದರ ಚೆಕ್ಕುಬಂದಿಯೂ ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಹೇಳುತ್ತಾರೆ ನನ್ನ ಆಸ್ತಿಗಳ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ ಎಂದು.

ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**